ಗನಾ ಶೀರೆ ಹೋಗ್ಯೋಗಿತ್ತಡ, ಕಡೇಗೆ ಯಮ್ಮನೆ ಕೂಸಿನ ಹತ್ರೆ ಹೇಳಿ ಅದ್ರ ತೆಗ್ಸಿ ಮತ್ತೊಂದ ಸುಮಾರ್ನ ಶೀರೆ ಹಾಕಿ ಇಟ್ಟಗಿದ್ದೊ,' ಎಂದಳು ಸಾವಿತ್ರಿ. ' ಶ್ಯೀ ಅತ್ಗೆ ಹಾಂಗ ಮಾಡಕಾಗಿತ್ತಿಲ್ಯೆ, ಯನ್ನತ್ರ ಬೇರೆ ಶೀರೆ ಇದ್ದಿತ್ತು.' 'ನಿನ್ನ ಕರದ್ರೆ ಓಗುಡಲು ಪರ್ರೊಸ್ತಿಲ್ಲೆ ಶೀರೆ ಪಂಚಾತ್ಗೆಗೆ ನಿನ್ನ ಕರಿತೊ. ಮತ್ತೆ ಇಲ್ಲೇ ಯಲ್ಲಾರು ಮನಗಿದ್ದೋ ಅವ್ವು'ಎನ್ನುತ್ತಾ ಸಾವಿತ್ರಿ ಗಂಗೆ ಸುಬ್ಬಿಯರನ್ನು ಹುಡುಕಾಡಿದಳು.

'ಇಲ್ಯಪ ಅವು ಬೆಳಿಗ್ಗೆ ಲಗೂನೆ ಯೋಳವ್ವು ಹೇಳಿ ಅಡ್ಗೆ ಚಪ್ಪರದಲ್ಲೇ ಮನಗ್ತೆ ಹೇಳಿದ್ದೊ'. 'ಹಂಗಾರ್ ಸರಿ ಬಿಡು'. ಎನ್ನುತ್ತಾ ಅತ್ತಿಗೆ ನಾದಿನಿ ಒಳಗೆ ಹೋದರು. ಆದರೆ, ಗಂಗೆಗೆ ಇದೆಲ್ಲಾ ಹೊಸದಲ್ಲ. ಈ ರೀತಿಯ ಸಣ್ಣ ಪುಟ್ಟ ಮಾತನ್ನ ಮನಸ್ಸಿಗೆ ತೆಗೆದುಕೊಳ್ಳುವದೂ ಇಲ್ಲ. ನಾಲ್ಕು ಮನೆ ನೋಡಿದವಳು. ಹಾಗಾಗಿ ಏನೂ ನಡೆದೇ ಇಲ್ಲವೇನೋ ಎಂಬಂತೇ ಇದ್ದುಬಿಡುತ್ತಾಳೆ. ಇದನ್ನೆಲ್ಲಾ ಕೇಳಿಸಿಕೊಂಡ ಸುಬ್ಬಿಗೆ ಸುಮ್ಮನಿರಲಾಗಲಿಲ್ಲ. 'ಕೇಳ್ತನೆ ಗಂಗಕ್ಕಾ' ಎಂದಳು. 'ಇದೆಲ್ಲಾ ಹೊಸದಲ್ಲ ಯಂಗೆ. ಅದೇ ಹೇಳ್ತವಲೆ ತೆಳದವ್ವು; 'ಬಪ್ಪಾಗ ಯಂತೂ ತಂಜವಿಲ್ಲೆ ಹೋಪಾಗ ತಗಂಡ್ ಹೋಗ್ತವಿಲ್ಲೆ, ಇದ್ದ ಮೂರು ದಿನಕ್ಕೆ ಯಂತಕ್ಕೆ ಪರಿತಾಪ ಪಟ್ಟಗಳವ್ವು' ಎಂದು ಸಣ್ಣದಾಗಿ ನಕ್ಕಳು ಗಂಗೆ. 'ನಿಂಗೆಂತಾ ಹೇಳಿ ಪ್ರಯೊಜನ ಇಲ್ಲೆ ಬಿಡು, ನಿನ್ನ ನೋಡೀರೆ ವಂದ ಕಾಲ ಅತ್ಲಾಗೆ ಇಟ್ಟಾಂಗ್ ಕಾಣ್ತು. ಸಾಕು ಮಲಗು.' ಎಂದಳು ಸುಬ್ಬಿ.

ಬೆಳಿಗ್ಗೆ ಸುಮಾರು ಮೂರು ಮೂರುವರೆಗೆ ಅಡಿಗೆಯವರು ಎದ್ದಾಗಿತ್ತು. ನಾಲ್ಕು ಘಂಟೆಗೆಲ್ಲಾ ಒಬ್ಬೊಬ್ಬರಾಗೇ ಸ್ನಾನ ಮುಗಿಸಿ ಕಾಫಿ, ಚಹ ಕಷಾಯ,ಬಿಸಿನೀರು ಎನ್ನುತ್ತಾ ಅಡುಗೆ ಚಪ್ಪರದ ಕಡೆ ಜನ ಜಮಾಯಿಸಲು ಶುರು ಮಾಡಿದರು. ಪದ್ಮಾವತಿಯ ಅಣ್ಣ ಮಾದೇವ ಅಂಗಳದಲ್ಲಿ ಅದೇನೋ ಪಾರುಪತ್ಯ ಮಾಡುತ್ತಿದ್ದ. 'ಅಲ್ಲೇ ಆಚೆ ಇದ್ದ ಗಜಾನನ ಬಂದು 'ಅಲ್ದೋ ಮಾದೇಭಾವ ನಿಂಗ ಯೆಲ್ಲಾ ನಿಶ್ಚಿತಾರ್ಥಕ್ಕೆ ಬಂದಿದ್ರನ ಅಲ್ದ, ನೀನು ಸೋದರಮಾವನಲಿ, ನೀ ಬರದ್ರೆ ಆಗ್ತೋ? ನೀ ಬಪ್ಪೆಯಲಿ. ಕೂಸು ಹೇಂಗಿದ್ದೋ.'? ಎಂದ.

'ಕೂಸು ಕೈ ತೊಕ್ಕಂಡು ಮುಟ್ಟವ್ವು. ತೊಳದಿಟ್ಟ ಯಜ್ಞೇಶ್ವರ'

'ಹಂಗರೆ ಲವ್ವ ಮೇರೇಜ ಸೈಯನ?'

'ಅಲ್ದಕ ಯಂಗೂ ತಂಗ್ಯವ್ವು ಗುಟ್ಟು ಬಿಟ್ಟದ್ವಿಲ್ಲೆ. ಯನಗೂ ಸರಿಯಾಗಿ ಗೊತ್ತಿಲ್ಲೆ. ಗೊತ್ತಾಗ್ತು ಬಿಡು. ಮಂಟಪದಲ್ಲಿ ಕಾಣಲಕ್ಕು.' 'ಅವ್ವು ದೊಡ್ಡ ಕುಳವ್ರೊ, ಕೂಸಿನ ಅಪ್ಪಯ್ಯ ಸೊಸಾಯ್ಟಿ ಅಧ್ಯಕ್ಷನಡ. ಇರ್ತಲ ಲೇಕ್ಕಾಚಾರ, ಆನು ಅಡಪಡ ಕೇಳ್ದೆ. ಸುದ್ದಿ ಖರೆಯೊ ಸುಳ್ಳೊ ಹೇಳಿ ನಿನ್ನ ಕೇಳೀರೆ ಗೊತ್ತಾಗ್ತು ಹೇಳಿ ಕೇಳ್ದೆ' ಎಂದ ಗಜಾನನ. ಅಷ್ಟರಲ್ಲಿ ಮಾದೇಮಾವ ಹೆಗಲ ಮೇಲಿನ ಪಂಚೆಯನ್ನು ಒಮ್ಮೆ ಎತ್ತಿ ಕೊಡವುತ್ತಾ ಒಳಗೆ ಯಾರೋ ಕರೆದರೆಂದು ಹೋದ.

ಮದುವೆಯ ದಿನ ದೊಡ್ಡ ಅಡುಗೆ. ಗಂಗೆಗೆ ಅಷ್ಟೊಂದು ಕೆಲಸವಿಲ್ಲ. ಹಾಲು ಮೊಸರಿನ ದೆಖುರೇಖು, ಚೀಟುಪಾಟು ಕೆಲಸವಷ್ಟೆ. ಈ ದಿನದ ಅಡಿಗೆ ಸೆಟ್ಟೇ ಬೇರೆ ಹಾಗಾಗಿ ಗಂಗೆಗೆ ಸ್ವಲ್ಪ ಬಿಡುವು.

ಬೆಳಗಿನ ಎಂಟು ಘಂಟೆಗೆಲ್ಲಾ ಹೆಣ್ಣಿನ ಕಡೆಯವರು ಬಂದು ಬಿಡಾರ ಬಿಟ್ಟಾಗಿದೆ. ಇಲ್ಲಿಯವರೆಂತೂ ಇದ್ದೇ ಇದ್ದಾರೆ. ಮೀನಾಕ್ಷಿ ಬಡಿಸುತ್ತಿದ್ದವಳು ಮಾದುವೆ ಕೂಸು ಬಂತು. ನೋಡ್ರೆ ಎಂದು ಗಂಗೆಯ ಗಮನ ಸೆಳೆದಳು. ಅವಳ ಬಣ್ಣವಷ್ಟೇ ಯಣಗಪ್ಪು. ಲಕ್ಷಣವಾಗಿದ್ದಳು. ಮೀನಾಕ್ಷಿ ಬಡಿಸುವ ನೆಪದಲ್ಲಿ ಎರಡೆರಡು ಸಾರೆ ಮದುವಣಗಿತ್ತಿಯನ್ನು ಮಾತಾಡಿಸಿ ಬಂದಳು . 'ಗಂಗಕ್ಕಾ ದೊಡ್ಡ ಅಡ್ಗೆಯವ್ವು ಬೇರೆ ಆದ್ರೂವ ನೀನು ಹನಿ ನೋಡು. ಅನ್ನ ಆಸೆ ಕಡಿಮೆ ಆದರೆ ಫಜೀತಿ. ನೀನು ಸೂಚ್ನೆ ಕೊಟ್ರೆ ಸಾಕು. ಮಾದೇವಣ್ಣಂಗೆ ಹೇಳು.' ಎನ್ನುತ್ತಾ ಪದ್ಮಾವತಿ ಆಸರಿ ಕುಡಿದ ಶಾಸ್ತ್ರ ಮುಗಿಸಿದಳು.

ಹತ್ತೂವರೆಗೆ ಮದುವೆ ಮುಹೂರ್ತ. ಒಂಭತ್ತು ಘಂಟೆಗೆಲ್ಲಾ ಸಭಾಪೂಜೆ ಮುಗಿಯಬೇಕು ಎಂದು ಪುರೋಹಿತರು ಹೇಳುತ್ತಿದ್ದರು. ಹುಡುಗಿಯ ಕಡೆಯವರು–

ಇದಿರುಗೊಳ್ವ ಬಾ ಸಖೀ,
ಮುದದಿ ಪದುಮನಾಭನ
ಸದಮಲಾಂಗ ಶ್ರೀಕರ
ಮದನಪಿತ ಶ್ರೀ ಕೃಷ್ಣನ
ಎಂದು ರಾಗವಾಗಿ ಎದಿರುಗೊಂಡ ಹಾಡು
ಹಾಡುತ್ತಿದ್ದರೆ; ಇಲ್ಲಿ ಸುಬ್ಬಿಯ ಮಗಳು